ದಿನಾಂಕಃ 30-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯವರ ಪರವಾಗಿ ಶ್ರೀ ಹೆಚ್ ಹೆಚ್ ಕೆ. ವಕೀಲರಿಂದಃ**

ನಿಮ್ಮ ಮೇಲಾಧಿಕಾರಿಯವರು ಯಾರು ಎಂದರೆ ನಮ್ಮ ತಾಲೂಕಿನ ಗೌರವಾನ್ವಿತ ತಹಶೀಲ್ದಾರ್ ಆಗಿರುತ್ತಾರೆ. ನಿಮ್ಮ ಕಚೇರಿಯು ಎಲ್ಲಿ ಬರುತ್ತದೆ ಎಂದರೆ ಕಾಪು ತಾಲೂಕಿನ ಗೌರವಾನ್ವಿತ ತಹಶೀಲ್ದಾರ್ ರವರ ಕಚೇರಿಯಲ್ಲಿ ಇರುತ್ತದೆ. ನೀವು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ರುಜು ಮಾಡುತ್ತೀರಿ ಅಲ್ಲವೇ ಎಂದರೆ ಹೌದು. ದಿಃ 20-09-2022 ರಂದು ನೀವು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ನಿಮ್ಮ ಸಹಿ ಇರುತ್ತದೆ ಅಲ್ಲವೇ ಎಂದರೆ ಹೌದು. ಕಚೇರಿಯ ಕೆಲಸವಲ್ಲದೆ ಬೇರೆ ಕೆಲಸಕ್ಕೆ ಕೆಲಸದ ಅವದಿಯಲ್ಲಿ ಹೋಗಬೇಕಾದ ಸಂದರ್ಭದಲ್ಲಿ ಯಾರ ಅನುಮತಿಯನ್ನು ಪಡೆಯಬೇಕಾಗುತ್ತದೆ ಎಂದರೆ ಮಾನ್ಯ ತಹಶೀಲ್ಲದಾರವರ ಅನುಮತಿಯನ್ನು ಪಡೆಯುತ್ತೇವೆ. ಕಾಪು ವೃತ್ತ ನಿರೀಕ್ಷಕರು ದಾಳಿ ಮಾಡುವ ವಿಷಯಕ್ಕೆ ಸಂಬಂದಿಸಿದಂತೆ ನಿಮಗೆ ಮನವಿ ಪತ್ರವನ್ನು ನೀಡಿರುತ್ತಾರೆಯೇ ಎಂದರೆ ಇಲ್ಲ. ನಿಮ್ಮ ಕಚೇರಿಯ ಕೆಲಸವಲ್ಲದೆ ಬೇರೆ ಕೆಲಸಕ್ಕೆ ವೃತ್ತ ನಿರೀಕ್ಷಕರು ಕರೆದಾಗ ನಿಮಗೆ ಮನವಿ ಪತ್ರ ನೀಡುವುದು ಅಗತ್ಯವಾಗಿರುತ್ತದೆ ಎಂದರೆ ಹೌದು. ಸಾಕ್ಷಿಯವರು ಮುಂದುವರಿದು ಇದು ನಮ್ಮ ಕೆಲಸವಾಗಿತ್ತು. ನೀವು ಕಚೇರಿಯನ್ನು ಕೆಲಸದ ಅವದಿಯಲ್ಲಿ ಹೊರಗೆ ಹೋದಾಗ ನಿಮ್ಮ ಕೆಲಸದ ಜವಾಬ್ದಾರಿಯನ್ನು ಯಾರಿಗೆ ನೀಡುತ್ತೀರಿ ಎಂದರೆ ಮಾನ್ಯ ತಹಶೀಲ್ದಾರರು ಅದನ್ನು ಹೇಳುತ್ತಾರೆ. ದಿಃ 20-09-2022 ರಂದು ನಿಮ್ಮ ಕಚೇರಿಯನ್ನು ಕೆಲಸದ ಅವದಿಯಲ್ಲಿ ಬಿಡುವಾಗ ಮಾನ್ಯ ತಹಶೀಲ್ದಾರ್ ರವರ ಲಿಖಿತ ಅನುಮತಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಸಾಕ್ಷಿಯವರು

ಮುಂಂದುವರಿದು ವೃತ್ತ ನಿರೀಕ್ಷಕರು ಕರೆದ ಸಮಯದಲ್ಲಿ ಕಚೇರಿಯ ಕೆಲಸದ ಅವದಿ ಮುಗಿದಿತ್ತು ಎಂದು ಹೇಳುತ್ತಾರೆ. ಪೊಲೀಸ್ ವೃತ್ತ ನಿರೀಕ್ಷಕರು ನಿಮಗೆ ಎಷ್ಟು ಗಂಟೆಗೆ ಕರೆ ಮಾಡಿ ಕರೆದಿರುತ್ತಾರೆ ಎಂದರೆ ಸಂಜೆ 5.55 ರ ಸಮಯಕ್ಕೆ ಕರೆದಿರುತ್ತಾರೆ. ಪೊಲೀಸ್ ವೃತ್ತ ನಿರೀಕ್ಷಕರು ನಿಮಗೆ ಕರೆ ಮಾಡಿದ ಸಮಯದಲ್ಲಿ ನೀವು ಎಲ್ಲಿ ಇದ್ದೀರಿ ಎಂದರೆ ತಾಲೂಕು ಕಚೇರಿಯಲ್ಲಿ ಇದ್ದೆನು. ದಾಳಿಗೆ ಹೋಗುತ್ತಿರುವ ವಿಚಾರವನ್ನು ನಿಮ್ಮ ಮೇಲಾಧಿಕಾರಿಗೆ ಮೇಲ್ ಅಥವಾ ಲಿಖಿತವಾಗಿ ತಿಳಿಸಿರುತ್ತೀರಾ ಎಂದರೆ ಕಾಲವಕಾಶ ಇರಲಿಲ್ಲ ಎಂದು ಹೇಳಿ ನಂತರ ಮೌಖಿಕವಾಗಿ ತಿಳಿಸಿರುತ್ತೇನೆ ಎಂದು ಹೇಳುತ್ತೇನೆ. ಮಾನ್ಯ ತಹಶೀಲ್ದಾರ್ ರವರು ಮತ್ತು ನೀವು ಒಂದೇ ಕಟ್ಟಡದಲ್ಲಿ ಇರುವುದು ಎಂದರೆ ಹೌದು. ದಾಳಿಯ ಕಾರ್ಯವು ಪೂರ್ಣಗೊಂಡ ನಂತರವಾದರೂ ಮಾನ್ಯ ತಹಶೀಲ್ದಾರ್ ರವರಿಗೆ ಲಿಖಿತ ಮಾಹಿತಿಯನ್ನು ನೀಡಿರುತ್ತೀರಾ ಎಂದರೆ ಹೌದು. ಆ ದಾಖಲೆಯನ್ನು ನೀವು ತನಿಖಾಧಿಕಾರಿಯವರಿಗೆ ನೀಡಿರುತ್ತೀರಿ ಅಲ್ಲವೇ ಎಂದರೆ ಹೌದು.

ದಿಃ 20-09-2022 ರಂದು ನೀವು, ಹೇಳಿರುವಂತಹ ದಾಳಿಗೆ ಹೋಗಿರುವುದೇ ಇಲ್ಲ ಆ ಕಾರಣದಿಂದ ಮಾನ್ಯ ತಹಶೀಲ್ದಾರ್ ರವರಿಂದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ನಿಮಗೆ ಮಾಹಿತಿ ಬಂದ ನಂತರ ಕಾಪುವಿನಿಂದ ಎಷ್ಟು ಗಂಟೆಗೆ, ಯಾರೊಂದಿಗೆ ಮತ್ತು ಯಾವ ವಾಹನದಲ್ಲಿ ಹೋಗಿರುತ್ತೀರಿ ಎಂದರೆ ನನ್ನ ಸ್ನೇಹಿತನ ವಾಹನದಲ್ಲಿ ಒಬ್ಬನೇ ಹೋಗಿರುತ್ತೇನೆ. ಆಹಾರ ನಿರೀಕ್ಷಕರಿಗೆ ಇಲಾಖಾ

ವಾಹನ ಇರುತ್ತದೆ ಅಲ್ಲವೇ ಎಂದರೆ ನಮಗೆ ಇರುವುದಿಲ್ಲ. ಈಗ ಹೇಳಿದ ವಿಚಾರದ ಬಗ್ಗೆ ನೀವು ದೂರಿನಲ್ಲಿ ಹೇಳಿರುತ್ತೀರಾ ಎಂದರೆ ಹೇಳಿರುವುದಿಲ್ಲ 6.20 ಕ್ಕೆ ಸ್ಥಳಕ್ಕೆ ತಲುಪಿದೆನೆಂದು ಹೇಳಿರುತ್ತೇನೆ. ನೀವು ಹೋಗಿದ್ದೆನೆಂದು ಹೇಳುವ ಸ್ಥಳವು ಕಾಪುವಿನಿಂದ ಎಷ್ಟು ಕಿ.ಮೀ ದೂರದಲ್ಲಿ ಇದೆ ಎಂದರೆ 20 ಕಿ. ಮೀ ದೂರದಲ್ಲಿ ಇದೆ. ವಿವಾದಿತ ಜಾಗವು ಎಲ್ಲಿ ಬರುತ್ತದೆ ಎಂದರೆ ರಾ. ಹೆದ್ದಾರಿಯಿಂದ ಹೆಜಮಾಡಿಗೆ ಹೋಗುವ ರಸ್ತೆಯಲ್ಲಿ ಬರುತ್ತದೆ ಅದು ರಾ. ಹೆದ್ದಾರಿಯೇ ಎಂದು ನನಗೆ ಗೊತ್ತಿಲ್ಲ. ವಿವಾದಿತ ಜಾಗವು ರಾ. ಹೆದ್ದಾರಿಯಿಂದ ಎಷ್ಟು ದುಾರದಲ್ಲಿ ಇದೆ ಎಂದರೆ 50 ರಿಂದ 60 ಮೀ ದೂರದಲ್ಲಿ ಇದೆ. ವಿವಾದಿತ ಜಾಗವು ರಸ್ತೆಯ ಯಾವ ಭಾಗದಲ್ಲಿ ಬರುತ್ತದೆ ಎಂದು ನಿಮಗೆ ಹೇಳಲು ಸಾಧ್ಯವಾಗುವುದಿಲ್ಲ ಎಂದರೆ ರಸ್ತೆಯ ಪಶ್ಚಿಮ ಭಾಗದಲ್ಲಿ ಬರುತ್ತದೆ. ನೀವು ಹೋದ ಜಾಗದ ಆಸು ಪಾಸಿನಲ್ಲಿ ಏನು ಬರುತ್ತದೆ ಎಂದರೆ ಪೂರ್ಣ ಕಾಂಪೌಂಡಿನ ದಕ್ಷಿಣ ಭಾಗದಲ್ಲಿ ಪಾಂಡುರಂಗ ಕರ್ಕೇರಾ ರವರ ಮನೆ ಬರುತ್ತದೆ. ಉತ್ತರ ಭಾಗದಲ್ಲಿ ಏನು ಇದೆ ಎಂದು ಗೊತ್ತಿಲ್ಲ. ಪೂರ್ವ ಭಾಗದಲ್ಲಿ ಏನು ಇದೆ ಎಂದರೆ 15 ಮೀ ಅಂತರದಲ್ಲಿ ರಸ್ತೆ ಇದೆ. ಈಗ ಹೇಳಿದ ವಿಷಯವನ್ನು ಪಂಚನಾಮೆಯಲ್ಲಿ ತೋರಿಸಿದ್ದಾರೆಯೇ ಎಂದರೆ ಹೌದು.

ದಿಃ 20-09-2022 ರಂದು ನಿಮ್ಮ ಮುಂದೆ ಪೊಲೀಸಿನವರು ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆಯೇ ಎಂದರೆ ಇಲ್ಲ. ದಿಃ 20-09-2022 ರಂದು ನೀವು ಆ ಸ್ಥಳಕ್ಕೆ ಹೋಗಿರುವುದೇ ಇಲ್ಲ ಆ ಕಾರಣದಿಂದ ಸ್ಥಳ ಪಂಚನಾಮೆಯನ್ನು ಆ ದಿನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೋದ ಸಮಯದಲ್ಲಿ ಅಲ್ಲಿ ಜನರು ಮತ್ತು ಪೊಲೀಸಿನವರು ಸೇರಿದ್ದರು ಎಂದರೆ ಹೌದು. ನೀವು ಹೇಳುವಂತಹ ಸ್ಥಳವು ಕಾಂಪೌಂಡ್ ಇರುವ ಕಟ್ಟಡವಾಗಿರುತ್ತದೆ

ಎಂದರೆ ಹೌದು. ನೀವು ಅಲ್ಲಿಗೆ ಹೋದಾಗ ಎಷ್ಟು ಸಮಯವಾಗಿತ್ತು ಎಂದರೆ ಸಂಜೆ 6.20 ರ ಸಮಯವಾಗಿತ್ತು. ಸೂರ್ಯ ಮುಳುಗಿದ ನಂತರ ಒಂದು ಮನೆಯ ಕಾಂಪೌಂಡ್, ಮನೆಯ ಒಳಗೆ ಹೋಗಲು ನ್ಯಾಯಾಲಯದಿಂದ ಶೋಧನಾ ವಾರಂಟನ್ನು ಪಡೆಯಬೇಕು ಎನ್ನುವ ವಿಚಾರವು ಒಬ್ಬ ಅಧಿಕಾರಿಯಾಗಿ ನಿಮಗೆ ತಿಳಿದಿರುತ್ತದೆ ಎಂದರೆ ಹೌದು. ಶೋಧನಾ ವಾರಂಟ್ ಇದೆಯೇ ಎಂದು ಸಂಬಂದಪಟ್ಟ ಪೊಲೀಸ್ ಅಧಿಕಾರಿಯನ್ನು ನೀವು ಕೇಳಿದ್ದೀರಾ ಎಂದರೆ ಇಲ್ಲ. ಮನೆಯ ಒಳಗೆ ಹೋಗಲು ಶೋಧನಾ ವಾರಂಟ್ ಅಗತ್ಯ ಇದೆ ಪಡೆದುಕೊಂಡು ಬನ್ನಿ ಎಂದು ಪೊಲೀಸಿನವರಿಗೆ ತಿಳಿಸಿರುತ್ತಾರೆ ಎಂದರೆ ಇಲ್ಲ. ನೀವು ಸ್ಥಳಕ್ಕೆ ಹೋಗದೇ ಇರುವುದರಿಂದ ನೀವಾಗಲೀ ಪೊಲೀಸಿನವರಾಗಲೀ ಶೋಧನಾ ವಾರಂಟನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ಹೇಳಿರುವ ಅಕ್ಕಿಯನ್ನು ವಶಕ್ಕೆ ಪಡೆಯುವ ಮೊದಲು ಸರ್ಕಾರದಿಂದ ನೀಡುವ ಅಕ್ಕಿಯೊಂದಿಗೆ ತಾಳೆ ಮಾಡಿ ನೋಡಿರುತ್ತೀರಾ ಎಂದರೆ ಹೌದು. ತಾಳೆ ಮಾಡಲು ಬಳಸಿದ ಸರ್ಕಾರದಿಂದ ವಿತರಿಸುವ ಅಕ್ಕಿಯನ್ನು ಎಲ್ಲಿಂದ ನೀವು ತಂದಿರುತ್ತೀರಿ ಎಂದರೆ ತಹಶೀಲ್ದಾರ್ ಕಚೇರಿಯಿಂದ ತಂದಿರುತ್ತೇನೆ. ತಾಲೂಕು ಕಚೇರಿಯಿಂದ ಸರ್ಕಾರದಿಂದ ವಿತರಿಸುವ ಅಕ್ಕಿಯನ್ನು ತೆಗೆದುಕೊಳ್ಳುವ ವೇಳೆ ಯಾರಿಗೆ ಮನವಿಯನ್ನು ನೀಡಿರುತ್ತೀರಿ ಎಂದರೆ ಮನವಿ ನೀಡಲು ಅವಕಾಶವಿರಲಿಲ್ಲ. ತಹಶೀಲ್ದಾರ್ ಕಚೇರಿಯಿಂದ ಅಕ್ಕಿಯನ್ನು ಪಡೆಯುವ ವೇಳೆ ಮಾನ್ಯ ತಹಶೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿ ಅವರಿಂದ ಆದೇಶವನ್ನು ಪಡೆದು ನಂತರ ತೆಗೆದುಕೊಂಡು ಹೋಗಬೇಕಾಗುತ್ತದೆ ಎಂದರೆ ಅದರ ಬಗ್ಗೆ ಗೊತ್ತಾಗುವುದಿಲ್ಲ. ಮಾನ್ಯ ತಹಶೀಲ್ದಾರ್ ಕಚೇರಿಯಿಂದ ಮಾದರಿ ಅಕ್ಕಿಯನ್ನು

ನೀವು ಎಷ್ಟು  ಗಂಟೆಗೆ ಯಾರಿಂದ ಪಡೆದುಕೊಂಡಿರುತ್ತೀರಿ ಎಂದರೆ ನನಗೆ ಕರೆ ಬಂದ ಕೂಡಲೇ ಮಾದರಿ ಅಕ್ಕಿಯನ್ನು ತೆಗೆದುಕೊಂಡು ಹೋಗಿರುತ್ತೇನೆ. ನೀವು ತೆಗೆದುಕೊಂಡು ಹೋಗಿರುತ್ತೇನೆ ಎಂದು ಹೇಳುವ ಮಾದರಿ ಅಕ್ಕಿ ಯಾವುದು ಮತ್ತು ಎಷ್ಟು ಕೆ.ಜಿ ತೆಗೆದುಕೊಂಡು ಹೋಗಿರುತ್ತೀರಿ ಎಂದರೆ 1 ಕೆಜಿ ಕುಚ್ಚಲಕ್ಕಿ ತೆಗೆದುಕೊಂಡು ಹೋಗಿರುತ್ತೇನೆ.

ಬೆಳ್ತಿಗೆ ಅಕ್ಕಿಯನ್ನು ತಾಳೆ ಮಾಡಲು ಮಾದರಿ ಅಕ್ಕಿಯನ್ನು ಎಲ್ಲಿಂದ ತೆಗೆದುಕೊಂಡು ಹೋಗಿರುತ್ತೀರಿ ಎಂದರೆ ಬೆಳ್ತಿಗೆ ಅಕ್ಕಿಯನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಮಾದರಿ ಅಕ್ಕಿಯನ್ನು ತೆಗೆದುಕೊಂಡು ಹೋಗುವ ಸಮಯದಲ್ಲಿ ಪಂಚನಾಮೆಯನ್ನು ಮಾಡಿರುತ್ತೀರಾ ಎಂದರೆ ಇಲ್ಲ. ವಶಪಡಿಸಿಕೊಂಡಿರುತ್ತೇನೆ ಎಂದು ಹೇಳುವ ಕುಚ್ಚಿ ಲಕ್ಕಿ ಮತ್ತು ಬೆಳ್ತಿಗೆ ಅಕ್ಕಿಯಲ್ಲಿ ಎಷ್ಟು  ಪ್ರಮಾಣದ ಅಕ್ಕಿಯನ್ನು ಪರಿಶೀಲನೆ/ ತುಲನೆ ಮಾಡುವುದಕ್ಕಾಗಿ ತೆಗೇದುಕೊಂಡಿದ್ದೀರಿ ಎಂದರೆ ಈಗ ನನಗೆ ನೆನಪಿಲ್ಲ ಪೊಲೀಸ್ ದಾಖಲೆಯಲ್ಲಿ ನಮೂದು ಆಗಿದೆ . ನೀವು ತೆಗೆದುಕೊಂಡು ಹೋಗಿದ್ದ ಮಾದರಿ ಅಕ್ಕಿ ಮತ್ತು ಸ್ಥಳದಲ್ಲಿ ತುಲನೆಗಾಗಿ ತೆಗೆದುಕೊಂಡು ಹೋಗಿರುತ್ತೇನೆ ಎಂದು ಹೇಳುವ ಕುಚ್ಚಲಕ್ಕಿ ಮತ್ತು ಬೆಳ್ತಿಗೆ ಅಕ್ಕಿಯಮ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೀರಿ ಅಲ್ಲವೇ ಎಂದರೆ ಹೌದು. ಈ ಬಗ್ಗೆ ಪೊಲೀಸಿನವರು ದಾಖಲೆಗಳನ್ನು ನಿಮ್ಮ ಹಾಜರಿಯಲ್ಲಿ ಬರೆದಿರುತ್ತಾರೆ ಮತ್ತು ನೀವು ಅದಕ್ಕೆ  ಸಹಿಯನ್ನು ಮಾಡಿರುತ್ತೀರಿ ಅಲ್ಲವೇ ಎಂದರೆ ಹೌದು. ಸ್ಥಳ ದಲ್ಲಿ ದಾಖಲೆಗಳನ್ನು ಯಾರು ಬರೆದರು ಎಂದರೆ ಪೊಲೀಸಿನವರು ಬರೆದರು ಅವರ ಹೆಸರು ಗೊತ್ತಿಲ್ಲ. ಒಟ್ಟು ಎಷ್ಟು ದಾಖಲೆಗಳನ್ನು  ಪೊಲೀಸಿನವರು ಬರೆದಿರುತ್ತಾರೆ ಎಂದರೆ ನೆನಪಿಲ್ಲ.

ದಾಖಲೆಗಳನ್ನು ಬರೆದ ತರುವಾಯ ನೀವು ಠಾಣೆಗೆ ಹೋಗಿರುತ್ತೀರಾ ಎಂದರೆ ಹೌದು. ನೀವು ಎಷ್ಟು ಸಮಯದವರೆಗೆ ಠಾಣೆಯಲ್ಲಿ ಇದ್ದೀರಿ ಎಂದರೆ ರಾತ್ರಿ 1.00 ಗಂಟೆಯವರೆಗೆ ಇದ್ದೆನು. ನೀವು ಠಾಣೆಯಲ್ಲಿ ಆ ದಿನ ಸಹಿ ಮಾಡಿರುತ್ತೀರಾ ಎಂದರೆ ಎಫ್ ಐ ಆರ್ ಮಾಡುವ ವೇಳೆ ಸಹಿ ಮಾಡಿರುತ್ತೇನೆ.

ನೀವು ದೂರನ್ನು ನೀಡಿರುತ್ತೀರಾ ಎಂದರೆ ಹೌದು. ಯಾವ ದಿನ ನೀಡಿರುತ್ತೀರಿ ಎಂದರೆ 20 ನೇ ತಾರೀಕಿನಂದೇ ನೀಡಿರುತ್ತೇನೆ. 20 ನೇ ತಾರೀಕಿನಂದು ನೀವು ದೂರು ನೀಡಿರುವುದಿಲ್ಲ ಎಂದರೆ ನೀಡಿರುತ್ತೇನೆ. ನೀವು ಹೇಳಿದ ರೀತಿಯಲ್ಲಿ 20 ನೇ ತಾರೀಕಿನಂದು ಪೊಲೀಸಿನವರು ನಿಮ್ಮನ್ನು ಕರೆದಿರುವುದಿಲ್ಲ. ನೀವು ಹೋಗಿರುವುದಿಲ್ಲ, ದಾಳಿ ಮಾಡಿರುವುದಿಲ್ಲ ಯಾವುದೇ ವಸ್ತುವನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ದಾಖಲೆಗಳನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ದಾಖಲೆಗಳನ್ನು ಪೊಲೀಸಿನವರು ಠಾಣೆಯಲ್ಲಿ ಬರೆದಿರುತ್ತಾರೆ ಅದಕ್ಕೆ ನೀವು ಠಾಣೆಯಲ್ಲಿಯೇ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಮಾದರಿ ಅಕ್ಕಿಯನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸಿನವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಪ್ರತಿಯೊಂದು ಚೀಲವನ್ನು ಪ್ರತ್ಯೇಕವಾಗಿ ತೂಕ ಮಾಡಿರುತ್ತೀರಾ ಅಥವಾ ಎಲ್ಲಾ ಚೀಲವನ್ನು ಒಟ್ಟಾಗಿ ತೂಕ ಮಾಡಿರುತ್ತೀರಾ ಎಂದರೆ ಪ್ರತ್ಯೇಕವಾಗಿ ಮಾಡಿರುತ್ತೇವೆ. ನೀವು ಹೇಳುವಂತೆ ಪ್ರತ್ಯೇಕವಾಗಿ ಪ್ರತಿ ಚೀಲವನ್ನು ತೂಕ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಹಾಜರು ಮಾಡಿರುವ ಭಾವಚಿತ್ರಗಳಿಗೂ ಆರೋಪಿಯವರಿಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ



ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 7 ರಲ್ಲಿ ಯಾವ ಸ್ಥಳದಲ್ಲಿ, ಯಾರ ಹಾಜರಿಯಲ್ಲಿ ಯಾವ ಸಮಯದಲ್ಲಿ ಮಾಡಲಾಗಿದೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಇರುವುದಿಲ್ಲ. ನಿಪಿ 4 ಮತ್ತು 5 ರಲ್ಲಿ ದಾಸ್ತಾನು ಸಂಗ್ರಹ ಮಾಡಿರುವುದು ಕಂಡು ಬರುವುದಿಲ್ಲ. ನೀವು ಹಾಜರು ಮಾಡಿರುವ ಭಾವಚಿತ್ರಗಳನ್ನು ಪ್ರಕರಣಕ್ಕಾಗಿ ನೀವು ಮತ್ತು ಪೊಲೀಸಿನವರು ಸೇರಿ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಯವರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪೊಲೀಸಿನವರು ಸೃಷ್ಟಿಸಿದ ಪ್ರಕರಣಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.